**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿಸಿ ಸಂಖ್ಯೆ : 75/2025**

**ಚಾ.ಸಾಃ 02, ಫ್ರಾ.ಸಾಃ 01**

| | |
|---|---|
| ಸಾಕ್ಷಿದಾರನ ಹೆಸರು | ಮೌಂಟ್ ಬ್ಯಾಟರ್ನ ತಳವಾರ |
| ತಂದೆಯ ಹೆಸರು | ಯಲ್ಲಪ್ಪ ತಳವಾರ |
| ವಯಸ್ಸು | 52 ವರ್ಷಗಳು |
| ಉದ್ಯೋಗ | ಕಂದಾಯ ನಿರೀಕ್ಷಕರು, ಮಾವಿನಕುರ್ವಾ ಹೋಬಳಿ |
| ವಾಸ್ತವ್ಯ | ಪ್ರಭಾತನಗರ, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 29-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿರುತ್ತೇನೆ.

ದಿನಾಂಕಃ 08-04-2025 ರಂದು ಸಂಜೆ 06-30ರ ಸಮಯಕ್ಕೆ ನಾನು ತಾಲೂಕು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅಬಕಾರಿ ಪೋಲೀಸರು ಕಚೇರಿಗೆ ಬಂದು ಪಡುಕುಳಿ ಗ್ರಾಮದಲ್ಲಿ ಮದ್ಯ ಮಾರಾಟದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ಬಂದಿದ್ದು ಈ ಬಗ್ಗೆ ದಾಳಿ ಮಾಡಲು ಸಹಕರಿಸುವಂತೆ ಕೋರಿರುತ್ತಾರೆ. ಆದ್ದರಿಂದ ತಹಶೀಲದಾರರವರು ನನ್ನನ್ನು ಮತ್ತು ಪಡುಕುಳಿ ಗ್ರಾಮ ಸಹಾಯಕರಾದ ಚಾಸಾ-3 ರವರನ್ನು ಅಬಕಾರಿ ಪೋಲೀಸರ ಜೊತೆಯಲ್ಲಿ ಹೋಗುವಂತೆ ಸೂಚಿಸಿರುತ್ತಾರೆ. ಅದರಂತೆ ಕಚೇರಿಯಿಂದ ಹೊರಟು ಸಂಜೆ 07-15 ರ ವೇಳೆಗೆ ಪಡುಕುಳಿ ಗ್ರಾಮಕ್ಕೆ ನಾವು ಅಬಕಾರಿ ಪೋಲೀಸರ ಜೊತೆ ಹೋಗಿರುತ್ತೇವೆ. ಅಬಕಾರಿ ಪೋಲೀಸರು ಪಡುಕುಳಿ ಗ್ರಾಮದ ಗೋಪಾಲ ಗೌಡ ಎಂಬುವವರ ಮನೆಯ ಹತ್ತಿರ ಹೋಗಿ ಕೇಳಲಾಗಿ ಗೋಪಾಲ ಗೌಡ ಮನೆಯಲ್ಲಿ ಇಲ್ಲ ಅಂತ ನ್ಯಾಯಾಲಯದ ಮುಂದೆ ಇರುವ ಆರೋಪಿ ಹೇಳಿರುತ್ತಾರೆ. ನಂತರ ಅಬಕಾರಿ ಪೋಲೀಸರು ಸರ್ಚ ವಾರಂಟ ವರದಿಯನ್ನು ತಯಾರಿಸಿ ಆರೋಪಿಗೆ ಸದರಿ ಮನೆಯ ಶೋಧನೆ ಮಾಡುವ ಬಗ್ಗೆ ತಿಳಿಸಿರುತ್ತಾರೆ. ಸದರಿ ಶೋಧನಾ ವರದಿಯನ್ನು ಈಗ ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಅಬಕಾರಿ ಪೋಲೀಸರು ಆರೋಪಿ ಇದ್ದ ಮನೆಯನ್ನು ಶೋಧನೆ ಮಾಡಿದಾಗ ಮನೆಯ ಒಳಗೆ ಒಂದು ರಟ್ಟಿನ ಬಾಕ್ಸ ಇದ್ದು ಅದರ ಒಳಗೆ 90 ಎಂ.ಎಲ್.ನ ಸುಮಾರು 35 ಹೈವರ್ಡ್ಸ ವಿಸ್ಕಿ ಪ್ಯಾಕಗಳು, ಕೆಂಪು ಚೀಲದಲ್ಲಿ 90 ಎಂ.ಎಲ್. ನ ಮದ್ಯದ ಟೆಟ್ರಾ ಪ್ಯಾಕಗಳು, ಮತ್ತೊಂದು ಕೆಂಪು ಚೀಲದಲ್ಲಿ 4 ಬಿಯರ್ ಬಾಟಲಿಗಳು, ಮತ್ತೊಂದು ಚೀಲದಲ್ಲಿ 3 ಬಿಯರ್ ಬಾಟಲಗಳು ಇದ್ದವು. ಪೋಲೀಸರು ಅವುಗಳನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿ ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ. ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿಯ ಮನೆಯ ಹತ್ತಿರ ಅಬಕಾರಿ ಪೋಲೀಸರು ಒಂದು ನಕಾಶೆಯನ್ನು

ತಯಾರಿಸಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಮದ್ಯಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-4 ರಲ್ಲಿರುವ ಪೌಚುಗಳನ್ನು ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಿರುವ 2 ಪೊಟ್ಟಣಗಳನ್ನು ತೆರೆಯಲು ಎಪಿಪಿಯವರು ಅನುಮತಿ ಕೋರಿದ್ದು, ಪರಶೀಲಿಸಲಾಗಿ ಪೊಟ್ಟಣಗಳ ಮೇಲೆ ಇರುವ ಸೀಲು ಸುಸ್ಥಿತಿಯಲ್ಲಿದ್ದು ತೆರೆಯಲು ಅನುಮತಿ ನೀಡಲಾಯಿತು. ಸದರಿ ಸೀಲ್ ಮಾಡಿರುವ ಪೊಟ್ಟಣಗಳ ಮೇಲೆ ಸಾಕ್ಷಿಯ ಸಹಿಗಳು ಇದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಎರಡು ಪೊಟ್ಟಣಗಳನ್ನು ತೆರೆಯಲಾಯಿತು. ಎರಡು ಪೊಟ್ಟಣಗಳಲ್ಲಿರುವ ಟೆಟ್ರಾ ಪ್ಯಾಕಗಳನ್ನು ಮತ್ತು ಬಿಯರ್ ಬಾಟಲಿಗಳನ್ನು ಮತ್ತು ಟಿನಗಳನ್ನು ನೋಡಿ ಗುರುತಿಸಿರುತ್ತಾರೆ. ಎರಡು ಪೊಟ್ಟಣಗಳನ್ನು ಮುಮಾ-1 ಮತ್ತು 2 ಎಂದು ಸಾಕ್ಷಿ ಸಹಿಯನ್ನು ಮುಮಾ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆ ದಿನ ಈಕೆಯ ಮನೆಯಲ್ಲಿ ಅಬಕಾರಿ ಪೋಲೀಸರು ದಾಳಿ ಮಾಡಿದ್ದು ಆ ಕಾಲಕ್ಕೆ ಆರೋಪಿ ಮನೆಯಲ್ಲಿದ್ದು ಮಾಹಿತಿ ನೀಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಆರೋಪಿಯ ಮನೆಗೆ ಹೋದಾಗ ಆರೋಪಿ ಒಬ್ಬರೇ ಇದ್ದರು. ಮನೆಯಲ್ಲಿ ಯಾರೂ ಇರಲಿಲ್ಲ. ಮನೆಯ ಹೊರಗೆ ಸಾರ್ವಜನಿಕರು ಯಾರೂ ಬಂದಿರಲಿಲ್ಲ. ಅಬಕಾರಿ ಪೋಲೀಸರು ತಾಲೂಕು ಕಚೇರಿಗೆ ಬಂದಾಗ ನಿಖರವಾಗಿ ಯಾರ ಮನೆಗೆ ದಾಳಿ ಮಾಡಲು ಹೋಗುತ್ತಿದ್ದೇವೆ ಎಂಬ ಬಗ್ಗೆ ನಮಗೆ ಮಾಹಿತಿ ನೀಡಿರಲಿಲ್ಲ. ಅಬಕಾರಿ ಪೋಲಿಸರು ಆಕೆಯ ಬಳಿ ಆಕೆಯ ಗಂಡನ ಬಗ್ಗೆ ವಿಚಾರಿಸಿದರು. ಅದನ್ನು ಹೊರತುಪಡಿಸಿ ಆರೋಪಿಗೂ ಪೋಲೀಸರಿಗೂ ಯಾವುದೇ ಮಾತುಕತೆ ಆಗಿರಲಿಲ್ಲ. ಅಬಕಾರಿ ಪೋಲೀಸರ ಜೊತೆ ನಾನೂ ಸಹ ಆರೋಪಿಯ ಮನೆಯ ಒಳಗೆ ಹೋಗಿರುತ್ತೇನೆ. ಆರೋಪಿಯ ಮನೆಯ ಒಳಕ್ಕೆ ಹೋದಾಗ ಮನೆಯ ಒಳಗೆ ಮದ್ಯ ಇತ್ತು. ನಿಖರವಾಗಿ ಯಾವ ಕೊಠಡಿ ಎಂದು ಹೇಳಲಾಗುವುದಿಲ್ಲ. ಮದ್ಯವನ್ನು ಒಂದು ಕೊಠಡಿಯಲ್ಲಿ ಮುಚ್ಚಿಡಲಾಗಿತ್ತು. ಯಾವುದರಿಂದ ಮುಚ್ಚಿಟ್ಟಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಮದ್ಯವು ಒಂದು ಕೊಠಡಿಯಲ್ಲಿತ್ತು. ಆದರೆ ಆ ಕೊಠಡಿ ಏನು ಎಂದು ನನಗೆ ಗೊತ್ತಾಗಲಿಲ್ಲ. ಆರೋಪಿಯ ಮನೆಗೆ ಹೋದ ನಂತರ ಮದ್ಯ ಇದ್ದ ಸ್ಥಿತಿಯಲ್ಲಿಯೇ ಪೋಲೀಸರು ಯಾವುದೇ ಫೋಟೋ ತೆಗೆಯಲಿಲ್ಲ. ಮದ್ಯಗಳನ್ನು ಅದು ಇದ್ದ ಜಾಗದಲ್ಲಿಯೇ ಅಬಕಾರಿ ಪೋಲಿಸರು ಲೆಕ್ಕ ಮಾಡಿರುತ್ತಾರೆ. ನಿಪಿ-4 ರ ಫೋಟೋಗಳನ್ನು ಮನೆಯ ಒಳಗೆ ತೆಗೆಯಲಾಗಿದೆ. ಪಂಚನಾಮೆ ತಯಾರಿಸಲು ನಾನು ಮಾಹಿತಿ ನೀಡಲಿಲ್ಲ. ಪಂಚನಾಮೆಯನ್ನು ನಾನು ಓದಿ ಸಹಿ ಮಾಡಿದ್ದೇನೆ. ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿದ್ದ ಟೆಟ್ರಾ ಪ್ಯಾಕಗಳು, ಬಿಯರ ಬಾಟಲಿಗಳು ಮತ್ತು ಬಿಯರ್ ಟಿನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಪಂಚನಾಮೆಯಲ್ಲಿಯ

ಚೆಕಬುಂದಿಯನ್ನು ಬರೆದಿದ್ದಾರೆ, ನಾನು ಚೆಕ್ ಬಂದಿಗೆ ಮಾಹಿತಿ ನೀಡಲಿಲ್ಲ. ನಾನು ಹೇಳಿರುವಂತೆ ಆರೋಪಿಯು ವಾಸವಾಗಿದ್ದ ಮನೆಗೆ ಅಬಕಾರಿ ಪೋಲೀಸರು ಯಾವತ್ತೂ ದಾಳಿ ಮಾಡೇ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯಿಂದ ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಬಕಾರಿ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**